

ಕಪ್ಪೆಗಳನ್ನು ಕೊಳ್ಳಲು ಬಾರದೆ ಮಾಯವಾದಾಗ ಕಪ್ಪೆ ಹಿಡಿಯುವವರ ಬದುಕು ಕೂಡ ಉಧ್ವಸ್ಥವಾಯಿತು ಎಂದು ಊಹಿಸಲು ಪರ್ಯಾಪ್ತವಾಗುವಂತೆ ಬಸಪ್ಪ ನಮ್ಮ ನಡುವೆ ಇದ್ದಾನೆ. ಆಮೇಲೆ ಅವನ ಹೆಂಡತಿ ಚೆನ್ನಮ್ಮ ಮತ್ತೊಬ್ಬ ಕಪ್ಪೆ ಹಿಡಿಯುವವನ ಜತೆಗೆ ಅಥವಾ ಕಪ್ಪೆ ಏಜೆಂಟನ ಜತೆಗೆ ಓಡಿಹೋದಮೇಲೆ ಬಸಪ್ಪ ಏನು ಮಾಡುವುದೆಂದು ಗೊತ್ತಾಗದೆ ಇದೇ ಊರಿನಲ್ಲಿಯೇ ಉಳಿದ. ಆಮೇಲೆ ಕಪ್ಪೆ ಹಿಡಿಯುವ ಕೆಲಸವನ್ನು ಮಾಡಲಿಕ್ಕೆ ಆಸ್ಪದವಿಲ್ಲದೆ ಯಾವು ಯಾವುದೋ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾನೆ.

ಈ ದಿನ ಬೆಳಿಗ್ಗೆ ಜಯಂತ ಅವನನ್ನು ತನ್ನ ಮನೆಯ ಪಕ್ಕದಲ್ಲಿ ಇದ್ದ ಸಣ್ಣ ತೆಂಗಿನ ತೋಟದ ತೆಂಗಿನಮರಗಳಲ್ಲಿ ಬಲಿತಿದ್ದ ತೆಂಗಿನಕಾಯಿಗಳನ್ನು ಕೊಯ್ದು ಅವುಗಳನ್ನು ಕೊಟ್ಟಿಗೆಗೆ ಹಾಕಿಸಲು ಬರಲು ಹೇಳಿದ್ದ. ಹಾಗೆ ಬಂದವನು ಹೇಳಿದ